doc-39
TP-2

Regd No M 1229 | 43rd Year | Sri 'Satyavadi' Mysore | 23—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಥೇದಾರ್ ಎ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಹಾಸನ ಜಿಲ್ಲೆಯಲ್ಲಿ ಪೂರ್ಣ ಪಾನಪ್ರತಿಬಂಧ ತರಲು ಸರಕಾರದ ನಿರ್ಧಾರ

ಟಿಬೆಟ್‌ನವರ ಆಗಮನ

ಶಿಲಾಂಗ್ 22 — ಭಾರತದಲ್ಲಿ ಆಶ್ರಯ ಕೋರಿ ಟಿಬೆಟು ಜನರ ಹೊಸ ತಂಡ ನಿಫಾಕ್ಕೆ ಆಗಮಿಸುತ್ತಿದೆ.

ವಿಶೇಷ ಅಧಿವೇಶನ

ಬೆಂಗಳೂರು 23 — ಕಂದಾಯ ಸಚಿವರಾದ ಶ್ರೀ ಕಡಿದಾಳ ಮಂಜಪ್ಪನವರು ಮಂಡಿಸಿದ ಭೂ ಸುಧಾರಣೆ ಮಸೂದೆ ಜೂಲೈ ಅಥವಾ ಜುಲೈ ತಿಂಗಳಿನಲ್ಲಿ ಸೇರುವ ವೈಸೂರು ಶಾಸನ ಸಭೆ ಅಧಿವೇಶನದಲ್ಲಿ ಚರ್ಚೆಗೆ ಬರುವ ಸಂಭವ ವಿದೆ.

ಗುಣಮುಖ

ನವ ದೆಹಲಿ 22 — ಭಾರತ ಸರಕಾರದ ಗೃಹಸಚಿವರಾದ ಪಂ|| ಗೋವಿಂದ ವಲ್ಲಭ ಪಂತರು ಹೃದ್ರೋಗ ಪೀಡಿತರಾಗಿದ್ದು ಈಗ ಗುಣಮುಖರಾಗುತ್ತಿರುವರು.

ಗುಡಿನೇಟಿನಿಂದ ಗಾಯ

ಶ್ರೀನಗರ 22 — ಸಮುಂ ಸಮಾಸ್ಥಗಿರೆಯಲ್ಲಿರುವ ಸಿಂದ್ಯಾ ಕಣಿವೆಯಲ್ಲಿ ಪಾಕಿಸ್ತಾನ ಸೇನಿಕರು ಗುಂಡು ಹಾರಿಸಿದ ಕಾರಣ ಮುಸ್ಲಿಂ ರೈತನೋರ್ವನು ಗಾಯಗೊಂಡು ಒಂದು ಹಸು ಸತ್ತಿತು.

ತಿಂಗಳಲ್ಲಿ ತೀರ್ಮಾನ

ಬೆಂಗಳೂರು 22 — ಜನಸಂಖ್ಯೆ ಆಧಾರದ ಮೇಲೆ ಸರ್ಕಾರದಕೆಲಸಗಳಿಗೆ ಜನರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಕೋಮು ವಾರು ಪ್ರಮಾಣದ ಪ್ರಶ್ನೆಯ ಮೇಲೆ ಇನ್ನೊಂದು ತಿಂಗಳಿನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುವದೆಂದು ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಬೆಂಗಳೂರು 22 — ಇಡೀ ಹಾಸನ ಜಿಲ್ಲೆಯಲ್ಲಿ ಪೂರ್ಣ ಪಾನಪ್ರತಿಬಂಧ ಜಾರಿಗೆ ತರಬೇಕೆಂದು ಈ ದಿನ ಸೇರಿದ್ದ ಮಂತ್ರಿ ಮಂಡಲದ ಸಭೆ ನಿರ್ಧರಿಸಿದೆ. ಪಕ್ಷದ ಜನರ ಅಭಿಪ್ರಾಯದ ಪ್ರಕಾರ ಈ ಕ್ರಮ ಕೈಗೊಳ್ಳಲಾಯಿತೆಂದು ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿ ಪತ್ರಿಕೆಯವರಿಗೆ ತಿಳಿಸಿದರು. ಹಾಸನ ದಲ್ಲಿ ಪಾನಪ್ರತಿಬಂಧ ಜಾರಿಗೆ ತರುವದರಿಂದ ಸರ್ಕಾರಕ್ಕೆ ವಾರ್ಷಿಕ ನಷ್ಟ ರೂ 23 ಲಕ್ಷ ಬಿದರೆಯಿಟ್ಟಿ ಪಾನಪ್ರತಿಬಂಧದಿಂದ ಸರ್ಕಾರಕ್ಕೆ ವಾರ್ಷಿಕ ನಷ್ಟ ರೂ 7 ಲಕ್ಷ. ಪಾನಪ್ರತಿಬಂಧ ಜಾರಿಗೆ ತರಲಿಲ್ಲವೆಂದು ಟೀಕಿಸುತ್ತಿದ್ದವರನ್ನು ಸುಮ್ಮನಿರುವಂತೆ ಮಾಡಲು ಈ ಕಾರ್ಯವನ್ನು ಶ್ರೀ ಜತ್ತಿಯವರು ಕೈಗೊಂಡರೆಂದು ಹೇಳಲಾಗಿದೆ ಶಾಸನ ಸಭೆ ಕಾಂಗ್ರೆಸು ಪಕ್ಷದ ಚುನಾವಣೆ ಸಡೆಯುಲಿದೆ

ಗ್ರಾಮಾಂತರ ಯೋಜನೆ

ಬೆಂಗಳೂರು 22 — ಗ್ರಾಮಾಂತರ ಸಾಲದ ಯೋಜನೆ ಈ ತಿಂಗಳು 1 ನೇ ತಾ| ನಿಂದ ಪ್ರಾಂತದಲ್ಲಿ ಜಾರಿಗೆ ಬಂದಿದೆ ಮೊದಲನೆ ಘಟ್ಟದಲ್ಲಿ ರೂ. 5 ಲಕ್ಷ ರೂ ಶೇಕಡ 4ವರೆ ಬಡ್ಡಿ ದರದ ವೇರೆ ಹಲಾವಣೆ ಆಗುವದು.

ಬಂಧನ

ತಿರುವೇಂದ್ರಂ 22 — ಈ ದಿನ ವಿಧಾನ ಸಭೆಯ ಹೊರಗಡೆ ಮತ್ತು ಒಳಗಡೆ ಪ್ರದರ್ಶನ ನಡೆಸಿದ ಕ್ರಾಂತಿಕಾರಿ ಸಮಾಜವಾದಿ ಪಕ್ಷದ ಸುಮಾರು 30 ಮಂದಿ ಬಂಧಿತರಾದರು ಸ್ಪೀಕರರು 1 ಗಂಟೆ ವೇಳೆ ಸಭೆ ಮುಂದುವರಿಸಿದ್ದರು

× ನವದೆಹಲಿ 20— ವೈಸೂರು ರಾಜ್ಯದಲ್ಲಿ ಡೆಟನೂಗಳ್ಳಾರೂ ಇಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ನಿರಾಕರಣೆ

ಅನ್ಯತಪುರ 22 — ಸಿಕ್ಕುರ ಧಾರ್ಮಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡದಿರುವ ಪ್ರಧಾನಿ ನೆಹರು ಮತ್ತು ತಾರಾಸಿಂಗರ ಒಪ್ಪಂದವನ್ನು ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ ತಿರಸ್ಕರಿಸಿದೆ.

ಸಮಿತಿ ಶಿಫಾರಸು

ದವ ದೆಹಲಿ — 1965 ರ ನಂತರ ಹಿಂದಿ ರಾಷ್ಟ್ರದ ಪ್ರಧಾನ ಅಧಿಕೃತ ಭಾಷೆ ಆದನಂತರ, ಪಾರ್ಲಿಮೆಂಟು ಕಾನೂನು ಪ್ರಕಾರ ನಿರ್ದಿಷ್ಟವಾಗಿ ಸೂಚನೆ ಮಾಡುವ ಉದ್ದೇಶಗಳಿಗೆ ಇಂಗ್ಲೀಷು ಮುಂದುವರಿಯಬೇಕೆಂದು ಅಧಿಕೃತ ಭಾಷೆಯ ಪಾರ್ಲಿಮೆಂಟಿನ ಸಮಿತಿ ಶಿಫಾರಸು ಮಾಡಿದೆ

ಮತ ಸ್ವಾತಂತ್ರ್ಯ

ನವ ದೆಹಲಿ — ಇಂಗ್ಲೀಷು ಭಾರತದ ಅಧಿಕೃತ ಭಾಷೆಯಾಗಬೇಕೆಂಬ ಶ್ರೀ ಫ್ರಾಂಕ್ ಆಂಥನಿ ನಿರ್ಣಯ ಸ್ಥಾಳಿ ಲೋಕಸಭೆಯ ಪರಿಶೀಲನೆಗೆ ಬರಲಿದೆ. ಈ ವಿಷಯದಲ್ಲಿ ಕಾಂಗ್ರೆಸಿಗರಿಗೆ ಮತ ಸ್ವಾತಂತ್ರ್ಯವಿದೆ.

ನವೆಂಬರಿನಲ್ಲಿ ಪರಿಶೀಲನೆ

ನವ ದೆಹಲಿ — ಪಾಕಿಸ್ತಾನಕ್ಕೆ ಬೇರುಬೇರಿ ವರ್ಗಾವಣೆ ಪರಿಶೀಲಿಸಲು ನವೆಂಬರು 10 ನೇ ತಾ|| ಸುಪ್ರೀಂ ಕೋರ್ಟಿನಿಂದ ನಿಗದಿ ಆಗಿದೆ.

ಮಂತ್ರಿಗಳಿಲ್ಲ

ಕಂಚಿ 22 — ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರದಲ್ಲಿ ಮಂತ್ರಿಮಂಡಲವಿಂದ ಅಧ್ಯಕ್ಷರ ಅಡಳಿತ ಇರುವುದು.

ಕೃಶ್ಚೇವರ ಕರೆ

ಲಂಡನ್ 22 — ಪೂರ್ವ ರಾಷ್ಟ್ರಗಳಲ್ಲಿ ಅಣು ಸ್ವತಂತ್ರ ವಲಯ ಸ್ಥಾಪನೆಯ ದೃಷ್ಟಿಯಿಂದ ಸರ್ವ ದೂರಪೂರ್ವ ರಾಜ್ಯಗಳು ಮತ್ತು ಆಗ್ನೇಯ ಏಷ್ಯ ರಾಜ್ಯಗಳು ಇವುಗಳೊಡನೆ ದ್ವಿಮುಖ ಒಪ್ಪಂದ ಮಾಡಿಕೊಳ್ಳಲು ರಷ್ಯ ಸಿದ್ಧ ವಿದೆಯೆಂದು ಪ್ರಧಾನಿ ನಿಕಿಬಾ ಕೃಶ್ಚೇವ್ ರವರು ತಿಳಿಸಿರುವರು.

ಭಾರತದ ಮೇಲೆ ಆರೋಪ

ಪೀಕಿಂಗ್ 22 — ಪ್ರಜ ಕಾಂಗ್ರೆಸಿನಲ್ಲಿ ಪಂಚೆ ಲಾಮಾ ಮಾತನಾಡುತ್ತಾ, ಕೆಲವು ಭಾರತೀಯರಿಗೆ ಟಿಬೆಟ್ಟಿನಲ್ಲಿ ಎಸ್ಟೇಟಾ ಆಶೆ ಇದೆ ಆದರೆ ಟಿಬೆಟ್ ಚೀನಾ ರಾಜ್ಯಕ್ಕೆ ಸೇರಿದುದು ಎಂದರು.

ನೆಹರೂರಿಗೆ ಪಾರಿತೋಷಕ

ಸವದೆಹಲಿ 19— ಕಳೆದ ಅರು ವರ್ಷಗಳಿಂದ ದೇಶ ವಿದೇಶಗಳಿಂದ ಜನ್ಮದಿನದ ಪಾರಿತೋಷಕವಾಗಿ ಪಂ || ನೆಹೆರೂರಿಗೆ 894259 ರೂಗಳು ಬಂದಿದೆ ; ಈ ನಿಧಿಯಿಂದ ನೂರಾರು ಯೋಗ್ಯ ಕಾರ್ಯಗಳಿಗೆ ಉದಾರ ದಾನ ಮಾಡಿ ಈಗ 27796 ರೂಗಳು ಮಿಕ್ಕಿವೆ — ನೆಹ್ರೂರವರ ರಾಷ್ಟ್ರ ಪರಿಹಾರ ನಿಧಿಗೆ 1947 ರಿಂದ 18472257 ರೂಗಳು ಬಂದಿದ್ದು, ಈ ಸ್ಥಿತಿಯೋಗ್ಯ ಕಾರ್ಯಗಳಿಗೆ ಕೊಡಲಾಗಿ ಏಪ್ರಿಲ್ 1 ರಂದು 282೦೦೦ ರೂಗಳು ಮಿಕ್ಕಿವೆ

——

ನವದೆಹಲಿ 22— ಬಿಹಾರಿನಲ್ಲಿ ಮೊಕೆಮೆ ಹತ್ತಿರ 16 ಕೋಟಿ ರೂಗಳ ಖರ್ಚಿನಿಂದ ಗಂಗಾ ನದಿಯ ಮೇಲೆ ಕಟ್ಟಲಾಗಿರುವ ಸೇತುವೆಯ ಪ್ರಾರಂಭೋತ್ಸವವನ್ನು ಮೇ 1 ರಂದು ಪಂ|| ನೆಹರು ನೆರವೇರಿಸುವ ನಿರಿಂತ್ಸಣೆಯಿದೆ.

ರಷ್ಯದ ಎಚ್ಚರಿಕೆ

ವಾಷಿಂಗ್ಟನ್ 22— ಅಮೇರಿಕಾವು ಪಶ್ಚಿಮ ಜರ್ಮನಿಗೆ ಅಣು ಸಾಮಗ್ರಿಗಳನ್ನು ಕಳುಹಿಸುವ ಬಗ್ಗೆ ಎಚ್ಚರಿಕೆ ಇತ್ತಿದೆ.

ಇನ್ನೂ ನಿರ್ಧರವಿಲ್ಲ

ಬೆಂಗಳೂರು— ರಾಜ್ಯವು ಆಹಾರ ಧಾನ್ಯ ವ್ಯಾಪಾರ ನಡೆಸುವ ವಿಚಾರದಲ್ಲಿ ಏನೂ ನಿರ್ಧಾರವಾಗಿಲ್ಲವೆಂದು ಬುಧವಾರ ಶಾಸನ ಸಭೆಯಲ್ಲಿ ತಿಳಿಸಲಾಯಿತು — 58–59 ಕ್ಕೆ ರಾಜ್ಯಕ್ಕೆ 27.3 ಲಕ್ಷ ಟನ್ ಆಹಾರಧಾನ್ಯ ಅವಶ್ಯಕತೆಯು ಅಂದಾಜೆಂದೂ ತಿಳಿಸಲಾಯಿತು.

ರಷ್ಯಾದ ಶಂಕೆ

ಮಾಸ್ಕೊ 22— ಪಶ್ಚಿಮ ಜರ್ಮನಿಯಲ್ಲಿ ಅಣು ಶಸ್ತ್ರಾಸ್ತ್ರ ಶೇಖರಣೆ ಬಗ್ಗೆ ರಷ್ಯಾ ಶಂಕೆ ವ್ಯಕ್ತಪಡಿಸಿ ಆ ಸರಕಾರಕ್ಕೆ ತಿಳಿಸಿದೆ.

ದಸ್ತಗಿರಿ

ತ್ರಿಚೂರು 22— ಇಲ್ಲಿ ಜಿಲ್ಲಾಧಿಕಾರಿಯವರ 144 ನೇ ಕಲಮ್ಮನ್ನು ಉಲ್ಲಂಘಿಸಿ ಮೆರವಣಿಗೆ ನಡೆಸಿದ ಆಪಾದನೆಗೆ 5 ಮಂದಿ ದಸ್ತಗಿರಿ ಮಾಡಲ್ಪಟ್ಟರು.

ಹಾಜ್ ಯಾತ್ರಿಕರು

ನವದೆಹಲಿ 21— ಭಾರತದಿಂದ ಹಾಜ್ ಯಾತ್ರೆಗೆ 4700 ಮಂದಿಗಿಂತ ಹೆಚ್ಚಾಗಿ ಹೋಗಿದ್ದಾರೆಂದು ಪ್ರಕಟವಾಗಿದೆ.

ರೂ 500 ಕ್ಕೆ ಮೇಲ್ಪಟ್ಟ ಸಂಬಳಗೆರು

ನವದೆಹಲಿ 21— 1958 ರ ಡಿಸೆಂಬರ್ 1 ರವರೆವಿಗೆ 3964 ಮಂದಿ ಭಾರತ ಸರ್ಕಾರದ ಅಧಿಕಾರಿಗಳು ತಿಂಗಳೊಂದಕ್ಕೆ 1 ಸಾವಿರ ರೂಗಳು ಮತ್ತು ಅದಕ್ಕಿಂತ ಹೆಚ್ಚಾಗಿ ವೇತನವನ್ನು ಪಡೆಯುತ್ತಿದ್ದರೆಂದೂ, ಅದೇ ಅವಧಿಯಲ್ಲಿ ತಿಂಗಳೊಂದಕ್ಕೆ 500 ರೂಗಳಿಗಿಂತ ಅಧಿಕವಾಗಿ ಒಂದು ಸಾವಿರಕ್ಕಿಂತ ಕಡಮೆ ವೇತನ ಪಡೆಯುತ್ತಿದ್ದ ಭಾರತ ಸರ್ಕಾರದ ಅಧಿಕಾರಿಗಳ ಸಂಖ್ಯೆ 11213 ಎಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

ನಾಳೆಯ ಪಂಚಾಂಗ

ಆ॥ ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪಕ್ಕಪ್ಪಣ್ಣ ಜೋಯಿಸರಿಂದ

24 ಶುಕ್ರವಾರ ನಾಡ್ಯ-ಬಿದಿಗೆ ವಿಶಾಖ

ವಿವಿಧ ವರ್ತಮಾನ

ನವದೆಹಲಿ 22— ಮೈಸೂರು ವಿಶ್ವವಿದ್ಯಾನಿಲಯಕ್ಕೆ 58–59 ರಲ್ಲಿ ನೀಡಲಾದ ಒಟ್ಟು ಗ್ರಾಂಟುಗಳನ್ನೂ ಹಾಗೂ ಯಾವಯಾವ ಭಾಬಿಗೆ ಈ ಹಣ ನೀಡಲಾಗಿದೆ ಎಂಬ ವಿಷಯವನ್ನೂ ಲೋಕಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ 21— ಸಂಗೀತ ನಾಟಕ ಅಕಾಡಮಿಯು 58–59 ಕ್ಕಾಗಿ ಪ್ರಾದೇಶಿಕ ರಾಜ್ಯ ಅಕಾಡಮಿಗಳೂ ಸೇರಿಕೊಂಡು ಒಟ್ಟು 52 ಸಂಸ್ಥೆಗಳಿಗೆ ರೂ435929 ರೂಗಳನ್ನು ಮಂಜೂರ್ಮಾಡಿದೆ ಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ವಾಷಿಂಗ್ಟನ್ 20— ರಾವಿ, ಬಿಯಾಸ್ ಮತ್ತು ಸೆಟ್ಲೆಜ್ ನದಿಗಳಿಂದ ಗೊತ್ತಾದ ಪ್ರಮಾಣದಲ್ಲಿ ಭಾರತ ನೀರನ್ನು ಪಡೆಯಲು ಅವಕಾಶ ಮಾಡಿಕೊಡುವ ಒಪ್ಪಂದಕ್ಕೆ ಭಾರತ ಮತ್ತು ಪಾಕಿಸ್ತಾನಗಳು ಸಹಿಹಾಕಿವೆ ಎಂಬುದಾಗಿ ಇಂದು ಅಂತರ್ರಾಷ್ಟ್ರೀಯ ಬ್ಯಾಂಕು ಪ್ರಕಟಿಸಿದೆ.

ಅಪೆರಾ— 21–4–59 ರಿಂದ

ಜಯಸಿಂಹ ತೆಲುಗು

ಪಾತ್ರ— ಎಸ್ ಟಿ ರಾಮರಾವ್, ಅಂಜಲಿ

ಪ್ರತಿದಿನ 3 ಆಟಗಳು

ವುಡ್‌ಲ್ಯಾಂಡ್ಸ್

ಜನಪ್ರಿಯ 3 ನೇ ವಾರ

ಅನಾಡಿ

(ಹಿಂದಿ)

ತಾರಾಗಣ— ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

[ದಿನವಹಿ 3 ಪ್ರದರ್ಶನಗಳು]

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೊಬಲಿಗರಾಗಿರಿ

Edited, Printed & Published by Dharma Prachara Nursa M S Krishna Rao at the Satyavadi Press Chamarajapuram, Mysore

ವಿಮಾನ ನಿರ್ಮಾಣದಲ್ಲಿ ಭಾರತ-ಸೋವಿಯತ್ ಸಾಂಸ್ಕೃತಿಕ ಸಂಘದ ಸದಸ್ಯರು ಸೋವಿಯತ್ ಸರ್ಕಾರಿ ನಿಯೋಗವನ್ನು ಸ್ವಾಗತಿಸುತ್ತಿರುವುದು